(ಇಂದು ದಿನಾಂಕ 08.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ನನ್ನ ಸಹೋದರಿಯರನ್ನು ಈ ದಾವೆಯಲ್ಲಿ ಕಕ್ಷಿದಾರರನ್ನಾಗಿ ಮಾಡಿಲ್ಲ. ನನ್ನ ತಂದೆ ಖರೀದಿ ಮಾಡಿದ ಕ್ರಯಪತ್ರದ ಆಧಾರದ ಮೇಲೆ ಅವರ ಹೆಸರಿಗೆ ಕಂದಾಯ ದಾಖಲೆಗಳು ಆಗಿದ್ದವು. ನನ್ನ ತಂದೆ 1999 ರಲ್ಲಿ ತನ್ನ ವೈಯಕ್ತಿಕ ಅಗತ್ಯಗಳಿಗೆ ಸಾಲ ಮಾಡಿದ್ದರು ಎಂದರೆ ಸರಿ. ಆ ಹಣದಿಂದ ಮಗ್ಗಗಳನ್ನು ಖರೀದಿಸಿ ಮನೆಯಲ್ಲಿ ಇರಿಸಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆ ಸಾಲ ತೀರಿಸಿದ ನಂತರ 2009 ರಲ್ಲಿ ಅವರ ಹೆಸರಿಗೆ ಸಾಲ ತೀರುವಳಿ ಪತ್ರ ಮಾಡಿಕೊಡಲಾಗಿತ್ತು. 2010 ರಲ್ಲಿ ನನ್ನ ತಂದೆಗೆ 62 ವರ್ಷ ವಯಸ್ಸಾಗಿತ್ತು. ನನ್ನ ತಂದೆಗೆ 60 ವರ್ಷ ಮೇಲ್ಪಟ್ಟ ಕಾರಣ ಅವರು ಸಾಲ ಪಡೆಯುವಾಗ ಅವರ ಜೊತೆಗೆ ನಾವು ಸಹ ಸಹ ಸಾಲಗಾರರಾಗಿ ಸಹಿ ಮಾಡಿದ್ದೆವು. ಸಾಲ ಪಡೆಯುವಾಗ ಅವರ ಸ್ವಯಾರ್ಜಿತ ಆಸ್ತಿಗಳನ್ನು ಬ್ಯಾಂಕಿಗೆ ಅಡಮಾನ ಮಾಡಿದ್ದರು. ಸಾಲವನ್ನು ನನ್ನ ತಂದೆಯೇ ಅವರ ಆದಾಯದಲ್ಲಿ ತೀರಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಾಯಾರ್ಜಿತ ಆಸ್ತಿಗಳು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಹ ನನ್ನ ತಂದೆಗೆ ಸಹಾಯ ಮಾಡಿದ್ದೇನೆ ಎನ್ನುತ್ತಾರೆ. ನನಗೆ ಯಾವುದೇ ಹಕ್ಕಿಲ್ಲದಿದ್ದರೂ ನನ್ನ ತಂದೆಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.